**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ.**

**ಸಿಸಿ ಸಂಖ್ಯೆ: 67/2017. ಚಾ.ಸಾ–1. ಫ್ರಾ.ಸಾ–3.**

| | | |
|---|---|---|
| ಹೆಸರು | : | ಎಸ್. ಮಹದೇವಶೆಟ್ಟಿ |
| ತಂದೆಯ ಹೆಸರು | : | ಲೇಟ್ ಸಣ್ಣಶೆಟ್ಟಿ |
| ವಯಸ್ಸು | : | 70 |
| ವೃತ್ತಿ | : | ನಿವೃತ್ತ ನೌಕರ |
| ವಾಸ | : | ಮೈಸೂರು |

ದಿನಾಂಕ 23–11–2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

2012 ರಿಂದ 2015 ರವರೆಗೆ ನಾನು ತಿ.ನರಸೀಪುರದ ಸೋಸಲೆ ಹೋಬಳಿಯ ರಾಜಸ್ವ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ಫ್ರಾಸಾ–1, 2 ಚಾಸಾ–4 ರಿಂದ 9 ರವರ ಪರಿಚಯವಿದೆ. ಆರೋಪಿತರ ಪರಿಚಯವಿದೆ. ಅವರನ್ನು ನೋಡಿದರೆ ಗುರುತಿಸುತ್ತೇನೆ. ಅವರನ್ನು ಗುರುತಿಸುವಿಕೆಯ ಬಗ್ಗೆ ಅವರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

ತಿ. ನರಸೀಪುರ ತಹಶೀಲ್ದಾರ್‌ರವರ ಆದೇಶದಂತೆ ಕೊಣಗಳ್ಳಿ ಗ್ರಾಮದ ಸರ್ವೆ ನಂ.26 ರ ಸರ್ಕಾರಿ ಓಣಿಯನ್ನು ಒತ್ತುವರಿ ಮಾಡಿದ್ದನ್ನು ದಿನಾಂಕ 17.04.2015 ರಂದು ನಾನು ಫ್ರಾಸಾ–1, 2, ಚಾಸಾ–4 ರಿಂದ 9 ರವರು ಸೇರಿಕೊಂಡು ಜೆ.ಸಿ.ಬಿ. ಯಂತ್ರ ಸಂಖ್ಯೆ ಕೆ–50/ಎಂ.643 ರಲ್ಲಿ ತೆರವುಗೊಳಿಸಲು ಅಲ್ಲಿಗೆ ಬೆಳಿಗ್ಗೆ 11.30 ಗಂಟೆಗೆ ಹೋಗಿದ್ದಾಗ, ಬಸವರಾಜು ಮತ್ತು ರಾಜಪ್ಪರವರ ಕುಟುಂಬದವರು ನಮ್ಮ ಕಾರ್ಯವನ್ನು ಮಾಡಲು ಬಿಡಲಿಲ್ಲ. ನಂತರ ನಾವು ವಾಪಸ್ಸಾಗಿರುತ್ತೇವೆ. ಅವರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ.

ಅದೇ ದಿನ ಸ್ಥಳದಲ್ಲಿ ಒಂದು ಪಂಚನಾಮವನ್ನು ಜರುಗಿಸಿರುತ್ತೇವೆ. ಅದರ ಪ್ರತಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.4 ಎಂದು ಗುರುತಿಸಲ್ಪಟ್ಟಿದೆ.

ದಿನಾಂಕ 18.04.2015 ರಂದು ನಾನು ಪೊಲೀಸರಿಗೆ ದೂರನ್ನು ಮತ್ತು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದವರ ವಿವರಗಳುಳ್ಳ ಪತ್ರವನ್ನು ನೀಡಿರುತ್ತೇನೆ. ಅವುಗಳನ್ನು ಮತ್ತು ಅವುಗಳಲ್ಲಿರುವ ನನ್ನ ಸಹಿಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.6, 7, 6(ಎ) ಮತ್ತು 7(ಎ) ಎಂದು ಗುರುತಿಸಲಾಯಿತು.

ಅದೇ ದಿನ ಮಧ್ಯಾಹ್ನದ ಸಮಯದಲ್ಲಿ ಪೊಲೀಸರು ಪಂಚನಾಮವನ್ನು ಘಟನಾ ಸ್ಥಳದಲ್ಲಿ ನಮ್ಮ ಸಮಕ್ಷಮ ಜರುಗಿಸಿರುತ್ತಾರೆ. ಅದನ್ನು ಮತ್ತು ಅದಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದು ಈಗಾಗಲೇ ನಿಪಿ.5 ಎಂದು ಗುರುತಿಸಲ್ಪಟ್ಟಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್ ಜೆ ಆರೋಪಿತರ ಪರ ವಕೀಲರಿಂದ**

ಸರ್ವೆ ನಂ.26 ರ ಜಮೀನನ್ನು ಆರೋಪಿತರು ಒತ್ತುವರಿ ಮಾಡಿದ್ದಾರೆ ಎಂದು ತಹಶೀಲ್ದಾರ್‌ರವರಿಗೆ ದೂರು ಬಂದಿರಲಿಲ್ಲ. ನಮ್ಮೊಂದಿಗೆ ಪೊಲೀಸರು ಇದ್ದರು ಎಂದರೆ ಸರಿ. ಪೊಲೀಸರು ಆರೋಪಿತರ ಹೆಸರು ಮತ್ತು ವಿಳಾಸದ ಬಗ್ಗೆ ಮೌಖಿಕವಾಗಿ ಕೇಳಿದ್ದು, ಆ ಬಗ್ಗೆ ಬರವಣಿಗೆ ಮಾಡಿಲ್ಲ. ಪೊಲೀಸರು ನಮ್ಮೊಂದಿಗೆ ಮೊದಲು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ಕೊಣಗಳ್ಳಿ ಗ್ರಾಮದವರು ಎಂದರೆ ಸರಿ.

ಆರೋಪಿತರು ನಮಗೆ ಯಾವುದೇ ಕೃತ್ಯ ಮಾಡಿಲ್ಲ. ಅವರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಸರ್ವೆ ನಂಬರ್‌ನ ಜಮೀನುಗೂ ಮತ್ತು

ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ಸದರಿ ಬಸವರಾಜು ಮತ್ತು ರಾಜಪ್ಪ ರವರನ್ನು ಸಾಕ್ಷಿದಾರರನ್ನಾಗಿ ಹೇಳಿಕೆಗಳನ್ನು ಪಡೆದಿಲ್ಲ.

ನಿಪಿ.5 ರ ವಿಷಯಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಹಾಗಾಗಿ, ನಿಪಿ.5 ರಂತೆ ಪಂಚನಾಮವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಕೊಣಗಳ್ಳಿ ಗ್ರಾಮದ ಬಸಪ್ಪ ದೇವರ ಮಗ ಜಯಪ್ಪ ರವರ ಸುಳ್ಳು ದೂರಿನ ಆಧಾರದ ಮೇಲೆ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ.**